ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೆ ಇಲ್ಲಿ ಅದಕ್ಷತೆಯ ಪ್ರಶ್ನೆ ಬರುವುದಿಲ್ಲ. ತಾವು ಹಿರಿಯ ಸದಸ್ಯರಿದ್ದೀರಿ. ತಾವು ತಮ್ಮ ಭಾವನೆಯನ್ನು ದೂರ ಮಾಡಬೇಕು ಕರ್ನಾಟಕದಲ್ಲಿ ಆಪರೇಷನ್ ಫಡ್ಲ್ (೨) ಮೂಲಕ ಮಿಲ್ಕ್ ಸೊಸೈಟಿಗಳ ಸಂಘಟನೆ ಮಾಡತಕ್ಕ ಗುರಿಯನ್ನು ಒನೇ ಯೋಜನೆಯಲ್ಲಿ ಇಟ್ಟುಕೊಂಡಿದೆ.

ಕಾಲೇಜು ಸಾರ್ವತ್ರಿಕ ಪರೀಕ್ಷೆಗಳಲ್ಲಿ ಕಾಪಿ ಹಾಗೂ ಅಕ್ರಮಣ ಪ್ರಕರಣಗಳಲ್ಲಿ ಸಿಕ್ಕರುವವರು.

೫೫. ಶ್ರೀ ಜಿ. ರಾಜುಗೌಡ (ಹಾನೂರು).—ಈ ಕೆಳಕಂಡ ಪ್ರಶ್ನೆಗೆ ಮಾನ್ಯ ಶಿಕ್ಷಣ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ೧೯೮೪-೮೫ ರಲ್ಲಿ ನಡೆದ ಕಾಲೇಜು ಸಾರ್ವತ್ರಿಕ ಪರೀಕ್ಷೆಗಳಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಕಾಪಿ ಹಾಗೂ ಅಕ್ರಮ ಪ್ರಕರಣಗಳಲ್ಲಿ ಸಿಕ್ಕಿ ಬಿದ್ದಿದ್ದಾರೆ.

ಆ) ಈ ಬಗ್ಗೆ ಈವರೆಗೆ ವಿಧಿಸಿರುವ ಗರಿಷ್ಟ ಹಾಗೂ ಕನಿಷ್ಟ ಶಿಕ್ಷೆ ಏನು ?

ಇ) ಇನ್ನು ಮುಂದೆ ಇಂತಹ ಪ್ರಕರಣಗಳು ನಡೆಯದ ರೀತಿಯಲ್ಲಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ೫,೮೭೫

ಆ) ಕನಿಷ್ಟ ೨ ಪರೀಕ್ಷೆಗಳಿಂದ ಮತ್ತು ಗರಿಷ್ಟ ಎಂಟು ಪರೀಕ್ಷೆಗಳಿಂದ ಹೊರ ಹಾಕಲಾಗುವುದು. (ಹಾಜರಾದ ಪರೀಕ್ಷೆಯನ್ನು ಒಳಗೊಂಡು.)

ಇ) ಪರೀಕ್ಷಾ ವೇಳೆಯಲ್ಲಿ ಗುಪ್ತದಳವನ್ನು ನೇಮಿಸಿ ಅಕ್ರಮ ಪ್ರಕರಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಕಡಿಮೆ ಮಾಡುವಲ್ಲಿ ಎಚ್ಚರಿಕೆ ವಹಿಸಲಾಗುತ್ತಿದೆ ಈ ಗುಪ್ತ ದಳದವರು ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೊಠಡಿಗಳಿಗೆ ಅನೀರೀಕ್ಷಿತ ಭೇಟಿ ನೀಡುತ್ತಾರೆ.

a) ಪೋಲಿಸ್ ಸೂಪರಿಂಟೆಂಡೆಂಟ್‌ರವರನ್ನು ಪರೀಕ್ಷಾ ಕೊಠಡಿಗಳ ಒಳಗೆ ಮತ್ತು ಹೊರಗೆ ಪೋಲಿಸ್ ಬಂದೋಬಸ್ತ್ ಏರ್ಪಡಿಸುವಂತೆ ಪರೀಕ್ಷಾ ಸಮಯದಲ್ಲಿ ಕೋರಲಾಗುವುದು.

b) ಹೊಲಿದ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಅಭ್ಯರ್ಥಿಗಳಿಗೆ ಕೊಡಲಾಗುತ್ತದೆ.

c) ಪರೀಕ್ಷಾರ್ಥಿಯು ಪರೀಕ್ಷೆ ಪ್ರಾರಂಭವಾದ ಮೊದಲ ತಾಸಿನ ನಂತರ ಉತ್ತರ ಪತ್ರಿಕೆಯನ್ನು ಕೊಟ್ಟು ಹೊರಗೆ ಹೋಗುವಾಗ ಅವರಿಂದ ಪ್ರಶ್ನೆ ಪತ್ರಿಕೆಯನ್ನು ಪಡೆದು ಕಳಿಸಲಾಗುವುದು.

d) ಯಾವ ಪರೀಕ್ಷಾರ್ಥಿಯು ಪರೀಕ್ಷೆ ಪ್ರಾರಂಭವಾದ ಮೊದಲ ತಾಸಿನಲ್ಲಿ ಹೊರಗೆ ಹೋಗುವಂತಿಲ್ಲ.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಒಟ್ಟು ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? ವರ್ಷಕ್ಕೆ ಎರಡು ಪರೀಕ್ಷೆಗಳೆಂದು ಹೇಳಿದ್ದೀರಿ, ಅವು ಸಾರ್ವತ್ರಿಕ ಪರೀಕ್ಷೆಗಳೋ ಅಥವಾ ತರಗತಿಯ ಪರೀಕ್ಷೆಗಳೂ ? ಕಾಪಿ ಹೊಡೆಯಂವುದಕ್ಕೆ ವಿದ್ಯಾರ್ಥಿಗಳು ಯಾವ ಯಾವ ಮಾರ್ಗಗಳು ಅನುಸರಿಸುತ್ತಾರೆ ?

ಶ್ರೀ ಎಂ. ರಘುಪತಿ.—ಯಾವ ಯಾವ ಮಾರ್ಗಗಳನ್ನು ಅನುಸರಿಸುತ್ತಾರೆಂದು ಹೇಳುವುದು ಕಷ್ಟ. ನಮಗೆ ಬಂದಿರತಕ್ಕ ದೂರಿನ ಪ್ರಕಾರ ಪುಸ್ತಕ ಇಟ್ಟುಕೊಂಡು ಕಾಪಿ ಪಡಾಡುತ್ತಾರೆ. ಕೆಲವರು ಬೋರ್ಡಿನಲ್ಲಿ ಬರೆದು ಕಾಪಿ ಮಾಡಿಸುತ್ತಾರೆ. ಕೆಲವರು ಚೀಟಿ ಇಟ್ಟುಕೊಂಡು ಹೋಗಿ ಬರುತ್ತಾರೆ. ಈ ಸಾರಿ ಒಂದು ಲಕ್ಷ ೬೦ ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು.

ಶ್ರೀ ಜಿ. ರಾಜುಗೌಡ.—ವರ್ಷಕ್ಕೆ ಕನಿಷ್ಟ ಎರಡು ಪರೀಕ್ಷೆಗಳೆಂದು ತಾವು ಹೇಳಿದ್ದೀರಿ, ಅವು ಸಾರ್ವತ್ರಿಕ ಪರೀಕ್ಷೆಗಳೊ ಅಥವಾ ತರಗತಿಯ ಪರೀಕ್ಷೆಗಳೊ ದಯವಿಟ್ಟು ಹೇಳಬೇಕು ? ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಹೋಗುವುದಕ್ಕೆ ಮುಂಚೆ ತಪಾಸಣೆಗೆ ಗುರಿಪಡಿಸಿದರೆ ಇಂತಹ ಪ್ರಕರಣಗಳನ್ನು

ನಡೆಯದಂತೆ ಸರ್ಕಾರದವರು ತಪ್ಪಿಸಬಹುದು. ಅದನ್ನು ಏತಕ್ಕೆ ಮಾಡಲಿಲ್ಲ ? ಮೊದಲು ಹೊಲಿದ ಉತ್ತರಪತ್ರಿಕೆಗಳನ್ನು ಕೊಡುವ ವ್ಯವಸ್ಥೆ ಇದೆಯೆಂದು ಹೇಳಿದ್ದೀರಿ, ಅದರ ಬಗ್ಗೆ ಸೃಷ್ಟೀಕರಣ ಕೊಡುತ್ತೀರಾ

ಶ್ರೀ ಎಂ. ರಘುಪತಿ.—ಬಿಡಿ ಬಿಡಿ ಆಗಿರತಕ್ಕ ಉತ್ತರ ಪ್ರತಿಗಳನ್ನು ಒದಗಿಸಿಕೊಟ್ಟರೆ ಅದರ ಜೊತೆ ಬೇರೆ ಪತ್ರಿಕೆಗಳನ್ನು ಸೇರಿಸುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ತಪ್ಪಿಸುವುದಕ್ಕೆ ಹೊಲಿದ ಪತ್ರಿಕೆಗಳನ್ನು ಮೊದಲು ಕೊಡುತ್ತಿದ್ದರು. ಈಗ ಕೊಡುತ್ತಿಲ್ಲ, ಇದರ ಬಗ್ಗೆ ತಪಾಸಣೆ ಮಾಡಲು ಸಲಹೆ ಕೊಟ್ಟಿದ್ದೇನೆ. ತಾವು ಹೇಳುವುದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಶ್ರೀ ಎಂ. ರಘುಪತಿ.—ವರ್ಷದಲ್ಲಿ ಕನಿಷ್ಟ ೨ ಪರೀಕ್ಷೆಗಳು ಆಗುತ್ತದೆ, ಒಂದು ಆನ್ಯುಯಲ್ ಎಗ್ಸಾಮಿನೇಷನ್, ಹಾಗೂ ಇನ್ನೊಂದು ಸಪ್ಲಿಮೆಂಟರಿ ಎಗ್ಸಾಮಿನೇಷನ್.

ಶ್ರೀ ಮದನಗೋಪಾಲ್ ನಾಯಕ್.—ಕಾಪಿ ಹೊಡೆಯತಕ್ಕಂತಹ ವಿದ್ಯಾರ್ಥಿಗಳನ್ನು ಡಿಬಾರ್ ಮಾಡುತ್ತೀರಿ. ಅದರ ಅವಧಿ ಎಷ್ಟು ? ಆಮೇಲೆ ನ್ಯೂಟೈಪ್ ಕೊಶ್ಚನ್‌ಗಳು ಕೆಲವು ಇರುತ್ತವೆ. ಅವುಗಳನ್ನು ಅಳ್ತೆರತಕ್ಕಂತಹ ಟೀಚರ್ಸ್‌ ಸಾಲ್ವ್ ಮಾಡಿಕೊಡುತ್ತಾರೆ. ಅಂತಹವರ ಮೇಲೂ ಕ್ರಮ ತೆಗೆದುಕೊಳ್ಳತಕ್ಕಂತಹ ಕಾಯಿದೆಗಳನ್ನು ತಾವು ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ನಿಜ, ಅಂತಹ ಪರೀಕ್ಷಾ ಕೇಂದ್ರಗಳಲ್ಲಿ ಉಪಾಧ್ಯಾಯರ ಪ್ರೇರಣೆಯಿಂದ ಕಾಪಿ ಹೊಡೆಯತಕ್ಕಂಥದ್ದು ನಡೆದಾಗ, ಅದು ನಮ್ಮ ಗಮನಕ್ಕೆ ಬಂದಿದ್ದು ಉಪಾಧ್ಯಾಯರ ಮೇಲೂ ಕ್ರಮ ತೆಗೆದುಕೊಳ್ಳಬೇಕೆಂಬ ನಿರ್ಣಯವನ್ನು ಮಾಡಿದ್ದೇವೆ. ಮತ್ತೆ ಡಾ: ನರಸಿಂಹಯ್ಯನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ಅವರ ಸಲಹೆಯ ಮೇರೆಗೆ ಪರೀಕ್ಷಾ ವಿಧಾನವನ್ನು ಬದಲಾವಣೆ ಮಾಡಬಹುದು. ಪರೀಕ್ಷಾ ಕೇಂದ್ರಗಳಲ್ಲಿ ಕಾಪಿ ಹೊಡೆಯತಕ್ಕಂಥದ್ದನ್ನು ತಪ್ಪಿಸುವ ಸಲುವಾಗಿ ಯಾವ ರೀತಿ ಮಾಡಬೇಕು ಎಂಬುದಮ್ಮ ಅವರು ಪರೀಕ್ಷೆ ಮಾಡುತ್ತಿದ್ದಾರೆ. ಅವರು ೨ ತಿಂಗಳಲ್ಲಿ ಸರ್ಕಾರಕ್ಕೆ ವರದಿಯನ್ನು ಕೊಡುವುದಾಗಿ ನಿನ್ನೆ ತಾನೆ ತಿಳಿಸಿದ್ದಾರೆ. ಆ ವರದಿ ಬಂದ ತಕ್ಷಣ ತಮ್ಮೆಲ್ಲರ ವಿಶ್ವಾಸವನ್ನು ಗಳಿಸಿ ಹೊಸ ವಿಧಾನವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮುಂದಿನ ವರ್ಷ ೧೯೬೬-೬೭ನೇ ಸಾಲಿನಿಂದ ಪರೀಕ್ಷಾ ವಿಧಾನದಲ್ಲಿ ಸೆಕೆಂಡರಿ ಹಾಗೂ ಪ್ರೀಯೂನಿವರ್ಸಿಟಿ ಎರಡಲ್ಲೂ ಇದನ್ನು ಅಳವಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ಮಲ್ಲಪ್ಪ. ಕಾಪಿ ಹೊಡೆಯುವಾಗ ವಿದ್ಯಾರ್ಥಿಗಳು ಸಿಕ್ಕಿ ಹಾಕಿಕೊಳ್ಳುತ್ತಾರೆ ಅಂತಹ ವಿದ್ಯಾರ್ಥಿಗಳು ಶಿಕ್ಷಕರ ಮೇಲೆ ಹಲ್ಲೆ ನಡೆಸಿದ್ದಾರೆ. ಅಂತಹವರ ಬಗ್ಗೆ ಏನು ಕ್ರಮ ಸರ್ಕಾರ ತೆಗೆದುಕೊಳ್ಳುತ್ತದೆ ?

ಶ್ರೀ ಎಂ. ರಘುಪತಿ.—ಅದು ನಿಜ. ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ. ಅಂತಹ ಶಿಕ್ಷಕರಿಗೆ ಪೂರ್ಣ ರಕ್ಷಣೆಯನ್ನು ಪೋಲೀಸ್‌ನವರು ಕೊಡಬೇಕೆಂಬ ನಿರ್ಣಯವನ್ನೂ ಕೂಡ ಮಾಡಿದ್ದೇವೆ. ಅಂತಹ ವಿದ್ಯಾರ್ಥಿಗಳನ್ನು ಕಾನೂನು ಪ್ರಕಾರ ಶಿಕ್ಷೆಗೆ ಗುರಿಪಡಿಸುವ ಕೆಲಸವನ್ನೂ ಕೂಡ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾಸ್ ಕಾಪಿಯಿಂಗ್ ಎಂದು ಹೇಳಿಬಿಟ್ಟು, ೧೦ ವಿದ್ಯಾರ್ಥಿಗಳು ಕಾಪಿ ಹೊಡೆಯುತ್ತಿದ್ದರೆ ಆ ಕೇಂದ್ರದಲ್ಲಿರುವ ಎಲ್ಲಾ ವಿದ್ಯಾರ್ಥಿಗಳನೂ ಡಿಬಾರ್ ಮಾಡಿದ್ದಾರೆ. ಇವರು ಕೂಡ ಒಟ್ಟಿಗೆ ೨೦-೩೦ ಜನ ಪರೀಕ್ಷಾ ಕೇಂದ್ರಕ್ಕೆ ಹೋಗುತ್ತಿರುತ್ತಾರೆ. ೫ ಜನ ನಿಜವಾಗಿ ಕಾಪಿ ಹೊಡೆಯುತ್ತಿದ್ದರೆ ಅಲ್ಲಿದ್ದ ಇನ್ನೂ ೧೦ ಜನ ವಿದ್ಯಾರ್ಥಿಗಳ ಮೇಲೆ ಸುಳ್ಳು ಕೇಸುಗಳನ್ನು ಹಾಕಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಹೇಳಿದ್ದಾದು ಸತ್ಯಕ್ಕೆ ದೂರವಾದ ವಿಷಯ. ಮಾಸ್ ಕಾಪಿಯಿಂಗ್ ಮಾಡಿದವರು ಎಂದರೆ ಬೋರ್ಡುಗಳ ಮೇಲೆ ಬರೆದಿರಂವುದು, ಎಲ್ಲರೂ ಪುಸ್ತಕಗಳನ್ನೇ ತೆಗೆದುಕೊಂಡು ಹೋಗಿ ಕಾಪಿ ಹೊಡೆಯುತ್ತಿರುವುದು, ಇಂತಹ ಸಂದರ್ಭದಲ್ಲಿ ಅದನ್ನು ಪತ್ತೆ ಹಚ್ಚಿದಾಗ ಅವರ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿದು, ಅದನ್ನು ಪೂರ್ಣವಾಗಿ ತಪಾಸಣೆ ಮಾಡುತ್ತೇವೆ. ಅವರು ಪುಸ್ತಕಗಳನ್ನೇ ನೋಡಿ ಉತ್ತರವನ್ನು ಬರೆದಿದ್ದಾರೆಯೇ ಇಲ್ಲವೇ

ಎಂಬುದನ್ನು ಪೂರ್ಣವಾಗಿ ಪರಿಶೀಲನೆ ಮಾಡಿದ ಮೇಲೆ ಅವರ ಫಲಿತಾಂಶವನ್ನು ಪ್ರಕಟಣೆ ಮಾಡುತ್ತೇವೆ.

ಶಿವಮೊಗ್ಗಕ್ಕೆ ಒಂದು ಕೃಷಿ ಕಾಲೇಜನ್ನು ಮಂಜೂರು ಮಾಡುವುದು.

೧೭೦. ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೃಷಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ೧೯೮೦–೮೫ನೇ ಸಾಲಿನಲ್ಲಿ ಶಿವಮೊಗ್ಗಕ್ಕೆ ಒಂದು ಕೃಷಿ ಕಾಲೇಜನ್ನು ಮಂಜೂರು ಮಾಡ ಬೇಕೆಂಬ ಬಗ್ಗೆ ಸರ್ಕಾರವು ತೀರ್ಮಾನವನ್ನು ತೆಗೆದುಕೊಂಡಿರುವುದು ನಿಜವಲ್ಲವೆ ?

ಆ) ಹಾಗಾದರೆ ಈ ನಿರ್ಧಾರವನ್ನು ಕಾರ್ಯಗತ ಗೊಳಿಸದಿರಲು ಕಾರಣವೇನು ?

ಇ) ಶಿವಮೊಗ್ಗದಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸುವ ಅವಶ್ಯಕತೆ ಹಾಗೂ ಬಹುಕಾಲದ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಈ) ಹಾಗಾದರೆ ಈ ಕಾಲೇಜನ್ನು ಈಗಿನ ಶೈಕ್ಷಣಿಕ ವರ್ಷದಿಂದ ಶಿವಮೊಗ್ಗದಲ್ಲಿ ಪ್ರಾರಂಭಿಸ ಲಾಗುವುದೆ ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು.

ಈ) ಇಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳ ಉತ್ತರ ಬಹುಶಃ ಟೈಪಿಂಗ್ ಮಿಸ್ಟೇಕ್ ಆಗಿರಬಹುದು. ಇದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಯೋಗ್ಯವಾಗಿದೆ. ಕಾರಣವೇನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಬಂಗಾರಪ್ಪನವರು ವ್ಯವಸಾಯ ಸಚಿವರಾಗಿದ್ದಾಗ ರಾಜ್ಯದಲ್ಲಿ ಮೂರು ಕೃಷಿ ಕಾಲೇಜುಗಳನ್ನು ಕೊಡಬೇಕೆಂದು ಹೇಳಿ, ಅದರಲ್ಲಿ, ಶಿವಮೊಗ್ಗದಲ್ಲಿ ಒಂದು, ಮತ್ತೊಂದು ಕೊಡಗು ಜಿಲ್ಲೆಯಲ್ಲಿ, ಮಗದೊಂದು ರಾಯಚೂರು ಜಿಲ್ಲೆಯಲ್ಲಿ, ಕೊಡುತ್ತೇವೆಂದು ಸದನದಲ್ಲಿಯೇ ಘೋಷಣೆ ಮಾಡಿದ್ದಾರೆ, ಅದು ನನ್ನ ತಿಳುವಳಿಕೆಗೆ ಬಂದಿದೆ. ಆ ದೃಷ್ಟಿಯಿಂದ ತಾವು ನನ್ನ ಪ್ರಶ್ನೆಗೆ ಮೊದಲನೆಯದಾಗಿ ಶ್ರೀ ಮಾನ್ ಜೆ. ಎಚ್. ಪಟೇಲ್‌ರವರು ಹಿಂದಿನ ಪ್ರಶ್ನೆಗೆ ಉತ್ತರಿಸಿದ ಹಾಗೆ ಮೊದಲು ಇಲ್ಲ ಎಂದು ಹೇಳಿ ನಂತರ 'ಉದ್ಭವಿಸುವುದಿಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಇದು ಸಮಂಜಸವಾಗಿಲ್ಲ. ಇದನ್ನು ದಯವಿಟ್ಟು ನೋಡಬೇಕು. ಮಂತ್ರಿಗಳು ಬದಲಾವಣೆಯಾಗ ಬಹುದು, ಮಂತ್ರಿಮಂಡಲ ಬದಲಾವಣೆಯಾಗಬಹುದು. ಆದರೆ ಸರ್ಕಾರ ಎನ್ನತಕ್ಕಂತಾಹದ್ದು ಸತತ ವಾಗಿ ನಡೆದುಕೊಂಡು ಹೋಗತಕ್ಕ ವಿಚಾರ. ಆದ್ದರಿಂದ ಮಂತ್ರಿಗಳು ಬದಲಾವಣೆಯಾದ ಮೇಲೆ ಕೆಲವು ಕಡತವನ್ನು ಕೆಲವರು ಒಳಗೆ ಇಟ್ಟು ಬಿಡುತ್ತಾರೆ. ಮತ್ತೊಬ್ಬ ಮಂತ್ರಿಗಳು ಬಂದಾಗ ಅಂತ ಹವುಗಳನ್ನು ಅವರಿಗೆ ತೋರಿಸುವುದೇ ಇಲ್ಲ ಆ ದೃಷ್ಟಿಯಿಂದ ಇದು ತಪ್ಪಾಗಿರಬಹುದು. ಇದನ್ನು ಪುನಃ ಪರಿಶೀಲನೆ ಮಾಡಿ ಉತ್ತರ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎಂ. ಪಿ. ಪ್ರಕಾಶ್.—ಪ್ರಾಯಶಃ ಶ್ರೀಮಾನ್ ಶ್ರೀನಿವಾಸ್ ರವರಿಗೆ ತಪ್ಪು ಮಾಹಿತಿ ಸಿಕ್ಕಿದಿಯೇ, ಅಥವಾ ಉದ್ದೇಶ ಪೂರ್ವಕವಾಗಿ ತಪ್ಪು ಮಾಹಿತಿಯನ್ನು ಹೇಳುತ್ತಿದ್ದಾರೋ ಗೊತ್ತಿಲ್ಲ. ಹಿಂದಿನ ಸರ್ಕಾರದವರೇ ಡಾ. ಜಿ. ವಿ. ಕೆ. ರಾವ್ ರವರ ನೇತೃತ್ವದಲ್ಲಿ ಒಂದು ಅಧ್ಯಯನ ತಂಡವನ್ನು ನೇಮಿಸಿ ಕೃಷಿ ಕಾಲೇಜುಗಳನ್ನು ಸ್ಥಾಪನೆ ಮಾಡತಕ್ಕಂತಹದ್ದರಲ್ಲಿ ಅವರಿಂದ ಯೋಗ್ಯ ಸಲಹೆಗಳನ್ನು ಕೊಡಬೇಕೆಂದು ಕೇಳಿಕೊಂಡಿತು ಆ ಅಧ್ಯಯನ ಸಮಿತಿಯು ರಾಯಚೂರು, ಕಂಠಾಲನಗರ ಹಾಗೂ ಶಿವಮೊಗ್ಗ. ಈ ಮೂರು ಸ್ಥಳಗಳಲ್ಲಿ ಮಾಡಬಹುದೆಂದು ಶಿಫಾರಸ್ಸು ಮಾಡಿದೆ. ಕೃಷಿ ಕಾಲೇಜನ್ನು ಮಾಡಬೇಕಾದರೆ, ಮೂಲಭೂತವಾಗಿ ಕೆಲವು ಸವಲತ್ತುಗಳು ಬೇಕಾಗುತ್ತದೆ. ಅವುಗಳೆಲ್ಲವೂ ತತ್‌ಕ್ಷಣ